9	ಉಪ ಅರಣ್ಯ ಸಂರಕ್ಷಣಾಧಿಕಾರಿ (ಸಾಮಾಜಿಕ ಅರಣ್ಯ)	59.650	46.460
10	ಜಿಲ್ಲಾ ಪಂಚಾಯತ್	810.797	21.769
	ಒಟ್ಟು :	**3081.466**	**879.988**

ಇ) ಸದರಿ ಯೋಜನೆಯು ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿರುವುದರಿಂದ ಉದ್ಯೋಗ ಕೋರಿ ಬಂದವರಿಗೆಲ್ಲರಿಗೂ ಉದ್ಯೋಗವನ್ನು ನೀಡಲಾಗಿದೆ.

74 ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ.ಲೇಔಟ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಏಪ್ರಿಲ್ 2009 ರಿಂದ ಇಲ್ಲಿಯವರೆಗೆ ಹೆಸರು ನೋಂದಾಯಿಸಿಕೊಂಡ ಕಾರ್ಮಿಕರ ಸಂಖ್ಯೆ ಎಷ್ಟು;

ಆ) ನೋಂದಾಯಿತ ಕಾರ್ಮಿಕರಿಗೆ ಕೆಲಸ ನೀಡಲು ಸಾಧ್ಯವಾಗದೇ ಇದ್ದಾಗ ರಾಜ್ಯ ಸರಕಾರ ಪ್ರತಿ ದಿನ ನೀಡಬೇಕಾದ ಭತ್ಯೆ ಎಷ್ಟು;

ಇ) ಈ ರೀತಿ ನೋಂದಾಯಿಸಿಕೊಂಡ ಕಾರ್ಮಿಕರಿಗೆ ಭತ್ಯೆ ನೀಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಕಾರ್ಮಿಕರಿಗೆ ಭತ್ಯೆ ನೀಡದೆಯಿರುವುದರಿಂದ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಆದೇಶವನ್ನು ಉಲ್ಲಂಘಿಸಿದಂತಾಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಏಪ್ರಿಲ್ 2009 ರಿಂದ ದಿನಾಂಕ: 18–12–2009 ರವರೆಗೆ ರೂ.1782369 ಕೂಲಿ ಕಾರ್ಮಿಕರ ಕುಟುಂಬಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗಕ್ಕಾಗಿ ನೋಂದಾಯಿಸಿಕೊಂಡಿರುತ್ತಾರೆ.

ಆ) ಅಧಿನಿಯಮದ ಪ್ರಕಾರ ಕೆಲಸವನ್ನು ಅರ್ಜಿದಾರರು ಅರ್ಜಿ ನೀಡಿದ 15 ದಿನಗಳ ಒಳಗೆ ಉದ್ಯೋಗವನ್ನು ನೀಡದಿದ್ದರೆ ಅಂತಹ ಅರ್ಜಿದಾರರು ನಿರುದ್ಯೋಗ ಭತ್ಯೆ ಪಾವತಿಗೆ ಅರ್ಹರಾಗುತ್ತಾರೆ. ಆರ್ಥಿಕ ವರ್ಷದಲ್ಲಿ ಮೊದಲ 30 ದಿನಗಳಿಗೆ ಕೂಲಿ ದರದ ಶೇಕಡಾ 25ರಷ್ಟು ಮತ್ತು ನಂತರದ ದಿನಗಳಿಗೆ ಕೂಲಿ ದರದ ಶೇಕಡಾ 50ರಷ್ಟು ನಿರುದ್ಯೋಗ ಭತ್ಯೆಯನ್ನು ಪಾವತಿಸಬೇಕು.

ಇ) ರಾಯಚೂರು ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಕೂಲಿ ಕಾರ್ಮಿಕರಿಗೆ ನಿರುದ್ಯೋಗ ಭತ್ಯೆಯನ್ನು ನೀಡಲಾಗಿರುತ್ತದೆ. ಸದರಿ ವಿವರಗಳನ್ನು ಈ ಕೆಳಗಿನಂತಿರುತ್ತದೆ:

ಜಿಲ್ಲೆ	ನಿರುದ್ಯೋಗ ಭತ್ಯೆ ಪಾವತಿಸಿದ ಕೂಲಿ ಕಾರ್ಮಿಕರ ಸಂಖ್ಯೆ	ನಿರುದ್ಯೋಗ ಭತ್ಯೆ ಪಾವತಿಸಿದ ಮೊತ್ತ (ರೂ.ಗಳಲ್ಲಿ)
ರಾಯಚೂರು	1446	593793
ದಾವಣಗೆರೆ	36	13655

ಈ) ನಿಗದಿತ ಅವಧಿಯಲ್ಲಿ ಉದ್ಯೋಗವನ್ನು ಒದಗಿಸದ ವಿಳಂಬ ಪ್ರಕರಣಗಳಲ್ಲಿ ನಿರುದ್ಯೋಗ ಭತ್ಯೆಯನ್ನು ಪಾವತಿಸುತ್ತಿರುವುದರಿಂದ ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಆದೇಶವನ್ನು ಉಲ್ಲಂಘನೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

758 ಶ್ರೀ ಮಹೇಶ್ ಎಸ್.ಆರ್. (ಕೃಷ್ಣರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುವರ್ಣಗ್ರಾಮ ಯೋಜನೆಯಡಿ ಮೈಸೂರು ಜಿಲ್ಲೆಗೆ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಸುವರ್ಣಗ್ರಾಮ ಯೋಜನೆಯಡಿ ಸರ್ಕಾರ ನಿಗದಿಪಡಿಸಿದ ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ;